

## ಬಾಯಾರಿದ ಜಿಂಕೆ

ಕಾಡು ಮೇಡುಗಳಿಲ್ಲ
ಹೊಟ್ಟೆಪಾಡಿಗಾಗಿ ಎಲ್ಲ
ಹರಿವ ತೊರೆ ನದಿ ಬತ್ತಿದೆಯಲ್ಲ?
ಹೋಗಬೇಕು ಎಲ್ಲಿಗೆ ನಾವೆಲ್ಲ?

ದೂರ ಪಯಣಿಸಿ ಬಂದೆನಿಲ್ಲಿಗೆ
ಮನುಷ್ಯರ ಕೂಸು ಈ ಕಾಂಕ್ರೀಟ್ ಕಾಡಿಗೆ
ಬಂದೆನು ನಿಮ್ಮ ಬೀಡಿಗೆ
ಇರಲು ಬಿಡಿ ನಾನು ನನ್ನ ಪಾಡಿಗೆ...

ಎಲ್ಲಿ ಹೋದರೂ ಟ್ರಾಫಿಕ್ ಜಾಮು
ಅಣ್ಣಾ ನಿನಗೊಂದು ಸಲಾಮು...
ನನಗಿಲ್ಲ ನಿನ್ನೊಂದಿಗೆ ವಹಿವಾಟು...
ಕೊಡುವೆಯಾ ನಿನ್ನ ಕಾಫಿಯಲ್ಲಿ ಬೈಟು

ಮಾಯಾ ಜಿಂಕೆಯಲ್ಲ ನಾನು
ಬಾಯಾರಿದಾಗ ಸಿಗದೇನು ನೀರು?
ಬದುಕುಳಿದರೆ ನಾನೂ
ನಡೆಸುವೆ ಕಾರುಬಾರು.

● ಶ್ರೀಲತಾ ಹರೀಶ್

## ಗುಟುಕು

ಬಿಸಿಲ ದಾರಿಯ ನಡುವೆ
ಬೆದರಿ, ಬೆವರಿ ನಿಂತಾಗ
ಅಪರಿಚಿತ ಹಸ್ತ ಹಿಡಿದ
ಪುಟ್ಟ ಲೋಟದಲಿ ಜೀವ ಜಲ!

ಅನುಮಾನದ ಅಂಚಿನಲ್ಲೂ
ಆತಂಕದ ಅವಸರ
ತುಸು ಹೀರಿಬಿಡುವ ಹಂಬಲ
ಆದರೆ, ಸೆರೆಯಾಗುವ ಭಯ

ದಾಹ... ತಾಳಲಾರೆ, ನಡೆಯಲಾರೆ
ಒಂದೆ ಹನಿ ಸವರಿ ನಾಲಿಗೆಗೆ
ಕಾಲು ಕೀಳಲೇ ಬೇಕು
ಈ ನೋಟಗಳ ತಪ್ಪಿಸಿ

ಕಾತರದ ಕಂಗಳ ಜೊತೆ
ಒಡ್ಡುವೆನು ಬಾಯಿ
ನೀಡಿದವನೆಡೆಗೊಂದು ಕೃತಜ್ಞತೆ
ಮತ್ತದೇ ಗುರಿಯಿಲ್ಲದ ನಡಿಗೆ.

● ಗಾಯತ್ರೀ ರಾಘವೇಂದ್ರ